# ನಿತ್ಯ ಕಲ್ಯಾಣ : 4ನೇ ದಿನದ ಕಾರ್ಯಕ್ರಮ

ಚಿತ್ರದುರ್ಗ ಆ. 12 - ಗುರುವಾದವನು ತಾನು ಮಾತ್ರ ಬೆಳೆಯುವುದಿಲ್ಲ. ಎಲ್ಲರನ್ನು ಬೆಳೆಸಬೇಕು. ಗುರುತ್ವ ಎಂದರೆ ಒಗ್ಗೂಡಿಸುವಿಕೆ. ಒಗ್ಗೂಡಿಸುವುದು ಸಾಧನೆಯಿಂದ ಮಾತ್ರ ಸಾಧ್ಯ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ವಿ.ಪಿ. ಬಡಾವಣೆಯ ಧರಣಿ ಶಾಲೆ ಆವರಣದಲ್ಲಿ ನಡೆದ ನಿತ್ಯ ಕಲ್ಯಾಣ 4ನೇ ದಿನದ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಗುರುತ್ವ : ಅದರಿಂದ ವಿಶ್ವಮಾನವತ್ವ ಸಾಧ್ಯವೆ? ವಿಷಯ ಚಿಂತನ ಮಾಡಿದ ಶ್ರೀಗಳು, ನಿತ್ಯ ಕಲ್ಯಾಣ ಎಂದರೆ ಚಲಿಸುವ ಅನುಭವ ಮಂಟಪ. ಗುರುತ್ವ ಎನ್ನುವುದು ಒಂದು ಸಾಧನೆ. ಅನುಭವ ಜನ್ಯವಾದ ಯಾನ. ಗುರುತ್ವದ ಒಳಗೆ ಶರಣತ್ವ ಇದೆ. ಶರಣತ್ವದ ಒಳಗೆ ಬಸವತ್ವ ಇದೆ. ಗುರುಗಳು ಎಂದು ಹೆಸರಿಟ್ಟುಕೊಂಡವರು ಮಾತ್ರ ಗುರುಗಳಲ್ಲ. ಗುರುತ್ವ ಅದು ತತ್ವ. ಎಲ್ಲ ತತ್ವಗಳು ಮಾನವತ್ವದ ಕಡೆಗೆ ಕ್ರಮಿಸಬೇಕಿದೆ. ಎಲ್ಲರು ಮಾನವತ್ವದ ಕಡೆಗೆ ಸಾಗಬೇಕು. ಅದುವೇ ಶ್ರೇಷ್ಠತ್ವ. ಇದು ಚಿಂತನೆಯನ್ನು ಮಾಡುವ ಕಾಲ. ಗುರುವು ಅಗಮ್ಯವನ್ನು ಮುಟ್ಟಬೇಕು. ದೇವರನ್ನು ಬಿಟ್ಟು ಗುರು, ಗುರುವನ್ನು ಬಿಟ್ಟು ದೇವರಿಲ್ಲ. ಗುರುಗಳಲ್ಲಿ ದೈವತ್ವವನ್ನು ಜನರು ಕಾಣುತ್ತಾರೆ. ಗುರುತ್ವ ಎಂದರೆ ದೈವತ್ವ. ಪ್ರಭುತ್ವಕ್ಕೆ ಒಳಗಾದವರು ಕರಗಿ ಕರಗಿ ಹೋಗುತ್ತಾರೆ ಎಂದು ನುಡಿದರು.

ಅಗೋಚರ : ಶಿವಶರಣರು ಶೂನ್ಯದ ಪ್ರತಿಪಾದಕರು. ಎಲ್ಲದನ್ನು ಒಳಗೊಂಡದ್ದು ಶೂನ್ಯ. ಗುರುತ್ವದಲ್ಲಿ ಶೂನ್ಯತ್ವ, ಶೂನ್ಯತ್ವದಲ್ಲಿ ಏಕತ್ವ ಇದೆ. ನಾವು ಇಂದು ಏಕೀಕರಿಸಬೇಕಿದೆ.

ಅಪ್ರತಿಮ : ಗುರುತ್ವ ಮಾನವತ್ವದ ಕಡೆಗೆ ಬಂದಾಗ ಅದಕ್ಕೆ ಪ್ರಾಮುಖ್ಯತೆ ಬರುತ್ತದೆ. ಇಲ್ಲಿ ಸಂಕುಚಿತವಾದ ಮಿತಿಗಳು ಇರಬಾರದು. ಗುರು, ಜ್ಞಾನ ಮತ್ತು ಕ್ರಿಯೆಗಳ ಸಂಗಮ. ಅವನೆ ನಿಜವಾದ ಜಂಗಮ. ಜಂಗಮತ್ವ ಅದು ಗುರುತ್ವ. ಬಸವಣ್ಣ ಪ್ರಭುದೇವನನ್ನು ಹರಸುತ್ತಾನೆ. ಅಲ್ಲಮ ಬಸವಣ್ಣನನ್ನು ಗುರುವನ್ನಾಗಿ ಒಪ್ಪಿಕೊಳ್ಳುತ್ತಾನೆ. ಪ್ಲೇಟೋಗೆ ಅರಿಸ್ಟಾಟಲ್, ವಿವೇಕಾನಂದರಿಗೆ ಪರಮಹಂಸರು, ಶಿಶುನಾಳ ಷರೀಫರಿಗೆ ಗುರುಗೋವಿಂದಭಟ್ಟರು ಗುರುವಾಗಿ ಸಿಗುತ್ತಾರೆ ಎಂದರು.

ಸಮ್ಮುಖ ವಹಿಸಿದ್ದ ದಾವಣಗೆರೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮಿಗಳು ಮಾತನಾಡಿ, ಶ್ರಾವಣಮಾಸ ಎಂದರೆ ಶ್ರವಣ ಮಾಡಬೇಕು. ಶಿವಚಿಂತನೆ ಕೇಳಬೇಕು. ನಮ್ಮ ಅಂತರಂಗದಲ್ಲಿರುವ ಕತ್ತಲನ್ನು ಹೊಡೆದೋಡಿಸುವ ಶಕ್ತಿ ನಮ್ಮದಾಗಬೇಕು. ಇಂದು ಮನುಷ್ಯ ಸ್ಫೂರ್ತಿಯನ್ನು ಕಳೆದುಕೊಂಡಿದ್ದಾನೆ. ಬೇಕು ಬೇಕು ಎನ್ನುವ ಹಪಾಹಪಿಗೆ ಒಳಗಾಗಿದ್ದಾನೆ. ಹಾಗಾಗಿ ಗುರುಗಳ ವಾಣಿ ಕೇಳಬೇಕು. ಗುರುವಿನ ಉಪದೇಶ ಕೇಳಬೇಕು. ಚಿಂತನೆ ಕೇಳಬೇಕು. ಸವಾಲುಗಳಿಲ್ಲದ ನಿಶ್ಚಿಂತ ಸ್ಥಿತಿಗೆ ತಲುಪಬೇಕು. ನಿತ್ಯ ಕಲ್ಯಾಣದಲ್ಲಿ ಭಾಗವಹಿಸಿದವರ ಅಂತರಂಗ ಶುದ್ಧಿಯಾಗುತ್ತದೆ ಎಂದರು.

ವಿಶ್ರಾಂತ ನ್ಯಾಯಮೂರ್ತಿ ಹೆಚ್. ಬಿಲ್ಲಪ್ಪ ಮಾತನಾಡಿ, ಗುರು ಅಂದರೆ ಭಾರವಾದದ್ದು. ಕತ್ತಲನ್ನು ಹೋಗಲಾಡಿಸಿ ಬೆಳಕನ್ನು ತೋರಿಸುವುದು. ಗುರುತ್ವ ಎನ್ನುವುದು ತತ್ವ. ಇದು ಶ್ರೇಷ್ಠತೆ. ಬದುಕನ್ನು ಜ್ಞಾನದ ಬೆಳಕಿನಲ್ಲಿ ನೋಡುವಂತಹದು. ನಾವು ನಗ್ನ ಶಿಶುವಾಗಿ ಬಂದವರು. ನನಗೆ ಹೆಸರು ಕೊಟ್ಟವರು ಯಾರು? ಧರ್ಮ ಕೊಟ್ಟವರು ಯಾರು? ಎನ್ನುವ ಹೊದಿಕೆಗಳನ್ನು ತೆಗೆಯಬೇಕು. ಎಲ್ಲರನ್ನು ಪ್ರೀತಿಸುವ ವಿಶ್ವಮಾನವರಾಗಬೇಕು. ಎಲ್ಲರೊಳಗೊಂದಾಗು ಎನ್ನುವ ಪ್ರಕ್ರಿಯೆ ಶ್ರೇಷ್ಠವಾದುದು.

ಶರಣರಲ್ಲಿದ್ದ ಶ್ರೇಷ್ಠ ಮಾನವತ್ವ ಯಾವ ಸಾಹಿತ್ಯದಲ್ಲು ಕಾಣಲು ಸಾಧ್ಯವಿಲ್ಲ. ಏನನ್ನು ಬಯಸದ ಮನೋಸ್ಥಿತಿ ನಮ್ಮದಾಗಬೇಕು. ನಮ್ಮ ಚಿಂತನೆಯನ್ನು ಬದಲಿಸುವುದರಿಂದ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ. ನಾವು ಗುಣಾತೀತರಾಗಬೇಕೆಂದರು.

ವೀರಶೈವ ಲಿಂಗಾಯತ ಹೇಮರಡ್ಡಿ ಮಲ್ಲಮ್ಮ ಸಮಾಜದ ಅಧ್ಯಕ್ಷ ಜಿ. ಚಿದಾನಂದಪ್ಪ, ಜಿ.ಪಂ. ಮಾಜಿ ಸದಸ್ಯ ಕೆ.ವಿ. ರಾಮಕೃಷ್ಣ, ಬಸವೇಶ್ವರ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಎಲ್. ಪಾಲಾಕ್ಷಯ್ಯ, ಚಿತ್ರದುರ್ಗ ವಕೀಲರ ಸಂಘದ ಉಪಾಧ್ಯಕ್ಷ ಜಿ.ಸಿ. ದಯಾನಂದ ವೇದಿಕೆಯಲ್ಲಿದ್ದರು.

ತಾಜ್‌ಪೀರ್, ಶ್ರೀಮತಿ ಮೋಕ್ಷ ರುದ್ರಸ್ವಾಮಿ, ಶ್ರೀಮತಿ ಗಾಯತ್ರಿ ಶಿವರಾಂ, ಮುರಿಗೆಸ್ವಾಮಿ, ಎ.ವಿಜಯಕುಮಾರ್, ಕೆ.ಎನ್. ವಿಶ್ವನಾಥಯ್ಯ, ಕಾರ್ಯಕ್ರಮ ದಾಸೋಹಿಗಳಾದ ಎನ್.ಬಿ. ವಿಶ್ವನಾಥ್ ಭಾಗವಹಿಸಿದ್ದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಎನ್.ಬಿ. ವಿಶ್ವನಾಥ್ ಸ್ವಾಗತಿಸಿದರು.

